**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**FDP** 60/2023 **CW** 1

| | | |
|---|---|---|
| ಸಾಕ್ಷಿದಾರರ ಹೆಸರು | : | ಶಫಿ ಎಂ ಮಾಗಡಿ |
| ತಂದೆ ಹೆಸರು | : | ಮಹ್ಮದ ಇಸ್ಮಾಯಿಲ್ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಸರ್ಕಾರಿ ಸರ್ವೆಯರ್ |
| ವಿಳಾಸಃ | : | ಹುಬ್ಬಳ್ಳಿ |

**ದಿಃ 07.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

ಸಾಕ್ಷಿ ವಿಚಾರಣೆಯನ್ನು ನ್ಯಾಯಾಲಯದಿಂದ ಮಾಡಿಸಲಾಯಿತು. ನಾನು ಸಿಟಿ ಸರ್ವೆಯರ್ ಆಗಿ ಸುಮಾರು 13 ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದು ಹುಬ್ಬಳ್ಳಿಗೆ ಬಂದು 2 ವರ್ಷಗಳಾಗಿರುತ್ತವೆ. ನನಗೆ ಈ ಪ್ರಕರಣದಲ್ಲಿ ನ್ಯಾಯಾಲಯದಲ್ಲಿ ಆಯೋಜಕನಾಗಿ ನನ್ನನ್ನು ನೇಮಕ ಮಾಡಿ ಆಯೋಜಕರ ಕೆಲಸ ನಿರ್ವಹಿಸಲು ನೇಮಿಸಲಾಗಿತ್ತು. ಆ ಪ್ರಕಾರ ನಾನು ನನ್ನ ಕರ್ತವ್ಯ ನಿರ್ವಹಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಿರುತ್ತೇನೆ. ಕಮೀಷನರ್ ವರದಿಯನ್ನು ನಿಶಾನೆ ಸಿ 1 ಎಂದು ಗುರ್ತಿಸಲಾಯಿತು. ಆ ನಂತರ ನನಗೆ ಸಾಕ್ಷ್ಯ ನೀಡಲು ನ್ಯಾಯಾಲಯದಿಂದ ಸಾಕ್ಷಿ ಸಮನ್ಸ ಬಂದಿತ್ತು.

**ಪಾಟೀ ಸವಾಲುಃ 1 ಮತ್ತು 2 ನೇ ಎದುರುದಾರ ಪರ ವಕೀಲರಾದ ಶ್ರೀ ಆರ ಎಸ ಎಚ ರವರಿಂದ.**

ದಾವಾ ಆಸ್ತಿಯಲ್ಲಿ ಎಷ್ಟು ಭಾಗ ಮಾಡುವಂತೆ ಆದೇಶವಾಗಿತ್ತು ಎಂದರೆ ಸಾಕ್ಷಿ 2 ಭಾಗ ಎನ್ನುತ್ತಾರೆ. ಸದರಿ ಆಸ್ತಿ ಏಲ್ಲಿ ಇದೆ ಎಂದರೆ ತಬೀಬ ಲ್ಯಾಂಡ ಹುಬ್ಬಳ್ಳಿಯಲ್ಲಿ ಇದೆ ಎನ್ನುತ್ತಾರೆ. ಸದರಿ ಆಸ್ತಿ ಮಣ್ಣು ಹಾಗೂ country tiled ಮನೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಮನೆ ಹಳೇಯ ಮನೆ ಎಂದರೆ ಸರಿ. ಹಿಂದಿನ ಭಾಗ ಸಂಪೂರ್ಣವಾಗಿ ಬಿದ್ದು ಹೋಗಿದೆ ಎಂದರೆ

ಸಾಕ್ಷಿ ಹೌದು demolish ಆಗಿದೆ ಎನ್ನುತ್ತಾರೆ. ಸದರಿ ಸ್ಥಳಕ್ಕೆ ಹೋಗುವ ಮೊದಲು ದಾವಾ ಆಸ್ತಿಗೆ ಸಂಬಂಧಿಸಿದ ಸಿಟಿಎಸ ಏಕ್ಸಟ್ರ್ಯಾಕ್ಟ ಹಾಗೂ ಮ್ಯಾಪನ್ನು ತೆಗೆದುಕೊಂಡು ಹೋಗಿದೀರಾ ಎಂದರೆ ಸಾಕ್ಷಿ ಕಚೇರಿಯಿಂದ ತೆಗೆದುಕೊಂಡು ಹೋಗಿದ್ದೆ ಎನ್ನುತ್ತಾರೆ. ನನ್ನ ರಿಪೋರ್ಟನಲ್ಲಾಗಲಿ ಅಥವಾ ನಾನು ಹಾಜರುಪಡಿಸಿರುವ ದಾಖಲೆಗಳಲ್ಲಾಗಲಿ ನಾನು ಕಚೇರಿಯಿಂದ ಸಿಟಿಎಸ ಏಕ್ಸಟ್ರ್ಯಾಕ್ಟ ಹಾಗೂ ಮ್ಯಾಪನ್ನು ತೆಗೆದುಕೊಂಡು ಹೋಗಿರುತ್ತೇನೆಂದು ಬರೆದಿಲ್ಲ ಹಾಗೂ ಹಾಜರುಪಡಿಸಿಲ್ಲವೆಂದರೆ ಸಾಕ್ಷಿ ನ್ಯಾಯಾಲಯದಿಂದ ಸಿಟಿಎಸ ಏಕ್ಸಟ್ರ್ಯಾಕ್ಟ ಬಂದಿತ್ತು ಅದೇ ರೀತಿ ಮ್ಯಾಪನ್ನು ನಾನು ನನ್ನ ರಿಪೋರ್ಟನೊಂದಿಗೆ ಸಲ್ಲಿಸಿರುತ್ತೇನೆ ಎನ್ನುತ್ತಾರೆ. ನನ್ನ ವರದಿಯಲ್ಲಿ ಸಿಟಿಎಸ ಏಕ್ಸಟ್ರ್ಯಾಕ್ಟ ಹಾಗೂ ಮ್ಯಾಪ ಇರುವ ಬಗ್ಗೆ ಕಾಣುತ್ತಿಲ್ಲವೆಂದರೆ ಸಾಕ್ಷಿ ತಮ್ಮ ವರದಿಯನ್ನು ನೋಡಿ ಅದರಲ್ಲಿ ತಾವು ತಯಾರು ಮಾಡಿರುವ ಮ್ಯಾಪ ತೋರಿಸುತ್ತಾರೆ. ಸಾಕ್ಷಿಗೆ ಅದನ್ನು ತೋರಿಸಿ ಇದು ನೀವು ತಯಾರು ಮಾಡಿರುವಂತಹ ಮ್ಯಾಪ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಕಚೇರಿಯಲ್ಲಿ maintain ಮಾಡಿರುವ ಮ್ಯಾಪ ಹಾಗೂ ಸಿಟಿಎಸ ಏಕ್ಸಟ್ರ್ಯಾಕ್ಟನ್ನು ನಿಮ್ಮ ಕೆಲಸ ನಿರ್ವಹಿಸುವ ಸ್ಥಳಕ್ಕೆ ತೆಗೆದುಕೊಂಡು ಹೋಗಿದ್ದೀರಾ ಎಂದರೆ ಸಾಕ್ಷಿ ತೆಗೆದುಕೊಂಡು ಹೋಗಿದ್ದೆ ಎನ್ನುತ್ತಾರೆ. ಸದರಿ ದಾಖಲೆಗಳನ್ನು ತೆಗೆದುಕೊಂಡು ಹೋದ ಬಗ್ಗೆ ನಾನು ವರದಿಯಲ್ಲಿ ನಮೂದು ಮಾಡಿಲ್ಲವೆಂದರೆ ಸಾಕ್ಷಿ ಹೇಳಿರುತ್ತೇನೆ ಎನ್ನುತ್ತಾರೆ.

ಎಷ್ಟು ಬಾರಿ ಸದರಿ ಆಸ್ತಿಗೆ ಭೇಟಿ ಕೊಟ್ಟೇರಿ ಎಂದರೆ ಸಾಕ್ಷಿ ಎರಡು ಬಾರಿ ಎನ್ನುತ್ತಾರೆ. ಈ ಸಂಬಂಧ ಪಕ್ಷಗಾರರಿಗೆ ನೋಟೀಸ ನೀಡಿದ್ದೀರಾ ಎಂದರೆ ಸಾಕ್ಷಿ 7 ದಿನಗಳ ಮೊದಲು ನೋಟೀಸ ನೀಡಿರುತ್ತೇನೆ ಎನ್ನುತ್ತಾರೆ. ಮೊದಲ ಬಾರಿಗೆ ನಿಮ್ಮ ಕೆಲಸ ಯಾವಾಗ ನಿರ್ವಹಿಸಿದ್ದೀರಿ ಎಂದರೆ ಸಾಕ್ಷಿ ದಿಃ25-09-2025 ಎನ್ನುತ್ತಾರೆ. 2 ನೇ ಬಾರಿ ದಿಃ15-10-2025 ರಂದು ಕೆಲಸ ನಿರ್ವಹಿಸಿರುತ್ತೇನೆ. ನನ್ನ ವರದಿ ನಾನು ಎರಡನೆ ಬಾರಿ ಕೆಲಸ ನಿರ್ವಹಿಸಿದ್ದರ ಆಧಾರದ ಮೇಲೆ ಇರುತ್ತದೆ. ಮೊದಲನೇಯ ಬಾರಿ ಹೋದಾಗ ಯಾಕೆ ವರದಿ ಕೊಡಲು ಆಗಲಿಲ್ಲ ಎಂದರೆ ಸಾಕ್ಷಿ ವಹಿವಾಟು ಮತ್ತು ನಮ್ಮ ನಗರ ಭೂಮಾಪನ ದಾಖಲೆಗಳಿಗೆ mismatch ಇತ್ತು ಎನ್ನುತ್ತಾರೆ. ಮೊದಲನೆ ಬಾರಿ ಸ್ಥಳಕ್ಕೆ ಹೋದಾಗ ಮತ್ತು ಅಳತೆ ಮಾಡಿದಾಗ ಸ್ಥಳದಲ್ಲಿ ಸರ್ಕಾರಿ ದಾಖಲೆಗಳಿಗಿಂತ ಹೆಚ್ಚು ಅಳತೆ ಇರುವುದು ಕಂಡು ಬಂದಿತ್ತು ಎಂದರೆ ಸರಿ. ಆ ಅಳತೆಯನ್ನು ನಾನು ನನ್ನ ವರದಿಯಲ್ಲಿ ಬರೆದಿಲ್ಲವೆಂದರೆ ಸರಿ. ನಾನು 2 ನೇ ಬಾರಿ ಕೆಲಸ ನಿರ್ವಹಿಸಿದ್ದರ ಆಧಾರದ ಮೇಲೆ ನನ್ನ ವರದಿ ಜೊತೆ ಮ್ಯಾಪ ಹಾಜರುಪಡಿಸಿರುತ್ತೇನೆಂದರೆ ಸರಿ. ನನ್ನ ಮ್ಯಾಪನಲ್ಲಿ ವಾದಿಯರಿಗೆ 35 ಚದರ ಯಾರ್ಡ ಹಾಗೂ ಪ್ರತಿವಾದಿಯರಿಗೆ 35 ಚದರ ಯಾರ್ಡ ಆಗಿ ನಮೂದು ಮಾಡಿರುತ್ತೇನೆಂದರೆ ಸರಿ.

ಸದರಿ ಮ್ಯಾಪನಲ್ಲಿ ಉತ್ತರ–ದಕ್ಷಿಣ ಹಾಗೂ ಪೂರ್ವ–ಪಶ್ಚಿಮ ಎಷ್ಟು ಅಳತೆ ಇದೆ ಎಂದು ನಮೂದು ಇಲ್ಲ ಎಂದರೆ ಸಾಕ್ಷಿ ಪೂರ್ವ–ಪಶ್ಚಿಮ ಅಳತೆ ನಮೂದಿಸಿರುತ್ತೇನೆ ಎನ್ನುತ್ತಾರೆ. ಮ್ಯಾಪನಲ್ಲಿ ಉತ್ತರ–ದಕ್ಷಿಣ ಅಳತೆ ಮಾಡಿಲ್ಲ ಆದರೆ ಸ್ಕೇಲ್ ಹಾಕಿರುತ್ತೇನೆಂದು ಸಾಕ್ಷಿ ನುಡಿಯುತ್ತಾರೆ. ವಾದಿಯರಿಗೆ ಕೊಡಬೇಕಾದ ಆಸ್ತಿ ಬಗ್ಗೆ ನಾನು ಆ ಆಸ್ತಿಯನ್ನು ಗುರುತಿಸುವಂತಹ ಯಾವುದೇ ಸೂಚನೆಗಳನ್ನು ಬರೆದಿಲ್ಲವೆಂದರೆ ಸಾಕ್ಷಿ ಬರೆದಿದ್ದೇನೆ ಎನ್ನುತ್ತಾರೆ. ನನ್ನ ವರದಿ ಜೊತೆ ಸಲ್ಲಿಸಿರುವ ಮ್ಯಾಪ ನೋಡಿದಾಗ ವಾದಿಯರ ಅಳತೆ ಜಾಸ್ತಿ ಇರುವುದಾಗಿ ಕಂಡು ಬರುತ್ತದೆ ಎಂದರೆ ಸಾಕ್ಷಿ ಇಲ್ಲ ಅದು ಸರಿ ಇದೆ ಎನ್ನುತ್ತಾರೆ. ಸದರಿ ಸ್ಥಳದಲ್ಲಿ ವಾದಿಯರಿಗೆ 35 ಚದರ ಯಾರ್ಡ ಹಾಗೂ ಪ್ರತಿವಾದಿಯರಿಗೆ 35 ಚದರ ಯಾರ್ಡ ಆಸ್ತಿ ನಡುವೆ ಗೋಡೆ ಬೇಕಾ ಅಥವಾ ಹಾಗೆ ಇರಬೇಕಾ ಎಂದರೆ ಸಾಕ್ಷಿ ಅದು ಅವರಿಗೆ ಬಿಟ್ಟ ವಿಚಾರ ಎನ್ನುತ್ತಾರೆ. ನಾನು ಅಳತೆ ಮಾಡಿದ್ದು rectangle ಆಕಾರನಲ್ಲಿ ಇದೆ straight ಇಲ್ಲ ಎಂದರೆ ಸರಿ. ದಾವಾ ಆಸ್ತಿಯ ಇದ್ದ ಪರಿಸ್ಥಿತಿಯನ್ನು ನಾನು ಅಳತೆ ಮಾಡಿ ವರದಿ ಹಾಕಿಲ್ಲ ಕೇವಲ 70 ಚದರ ಯಾರ್ಡ ಇದಿದ್ದನ್ನು ಕಚೇರಿಯಲ್ಲಿ ಕುಳಿತು 35 ಹಾಗೂ 35 ಎಂದು ಭಾಗ ಮಾಡಿಕೊಟ್ಟಿರುತ್ತೇನೆಂದರೆ ಸಾಕ್ಷಿ ಸ್ಥಳಕ್ಕೆ ಹೋಗಿ ಭಾಗ ಮಾಡಿರುತ್ತೇನೆ ಎನ್ನುತ್ತಾರೆ. ನಾನು ಮಾಡಿರುವಂತಹ ಪ್ರಕಾರ ಅಲ್ಲಿ ಭಾಗ ಇರುವುದಿಲ್ಲವೆಂದರೆ ಸಾಕ್ಷಿ ನ್ಯಾಯಾಲಯದ ಆದೇಶದ ಪ್ರಕಾರ ನಾನು ಮಾಡಿರುತ್ತೇನೆ ಎನ್ನುತ್ತಾರೆ. ಹಿಂದುಗಡೆ ಬಿದ್ದು ಹೋದ ಭಾಗವನ್ನು ಪ್ರತಿವಾದಿಯರಿಗೆ ತೋರಿಸಿರುತ್ತೇನೆಂದರೆ ಇಲ್ಲ ಅವರ ವಹಿವಾಟಿನ ಪ್ರಕಾರವೆ ತೋರಿಸಿರುತ್ತೇನೆ ಎನ್ನುತ್ತಾರೆ.

ಸಾಕ್ಷಿಗೆ ಈ ಹಂತದಲ್ಲಿ ದಿಃ25–09–2025 ರಂದು ನಾನು ಮೊದಲ ಬಾರಿಗೆ ಪಕ್ಷಗಾರರಿಗೆ ಕೊಟ್ಟ ನೋಟೀಸ ಎಂದು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಒಪ್ಪಿಕೊಂಡಿದ್ದರಿಂದ ನಿಶಾನೆ ಸಿ 1(ಎ) ಎಂದು ಗುರ್ತಿಸಲಾಯಿತು. ಅದರಂತೆ ದಿಃ15–10–2025 ರಂದು ಎರಡನೇಯ ಬಾರಿ ಕೊಟ್ಟ ನೋಟೀಸ ಎಂದು ತೋರಿಸಲಾಗಿ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದನ್ನು ನೋಡಿ ಒಪ್ಪಿಕೊಂಡಿದ್ದರಿಂದ ನಿಶಾನೆ ಸಿ 1(ಬಿ) ಎಂದು ಗುರ್ತಿಸಲಾಯಿತು. ಸದರಿ ನೋಟೀಸಗಳು ನಾನು ಯಾವ ದಿನ ಆಯೋಜಕರ ಕೆಲಸ ಮಾಡುತ್ತೇವೆಂದು ಹೇಳಿರುತ್ತೇವೆ ಆದೇ ದಿನದ ನೋಟೀಸ ಎಂದರೆ ಸಾಕ್ಷಿ ಇಲ್ಲ ಅದನ್ನು 7 ದಿನ ಮೊದಲೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಮುಂಚಿತವಾಗಿ ಯಾವುದೇ ರೀತಿಯ ನೋಟೀಸನ್ನು ಪಾರ್ಟಿಗಳಿಗೆ ಕೊಟ್ಟಿಲ್ಲ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆ ಎನ್ನುತ್ತಾರೆ. ನನ್ನ ಸಂಪೂರ್ಣ ವರದಿ ಕೇವಲ ವಾದಿಯರ ಹೇಳಿಕೆ ಮೇಲೆ ಮಾಡಿರುತ್ತೇನೆ ಹೊರತು ಸ್ಥಳಕ್ಕೆ ಹೋಗಿ ಸರಿಯಾದ ಅಳತೆ ಮಾಡಿಲ್ಲ ಎಂದರೆ ಸಾಕ್ಷಿ ಅದು ಸರಿ ಅಲ್ಲ ಎನ್ನುತ್ತಾರೆ. ನನ್ನ ವರದಿ

ಕೇವಲ ವಾದಿಯರ ಸೂಚನೆ ಮೇರೆಗೆ ಇದೆ ಎಂದರೆ ಅದು ಸರಿ ಅಲ್ಲ, ನ್ಯಾಯಾಲಯದ ಆದೇಶದ ಮೇರೆಗೆ ಮಾಡಿರುತ್ತೇನೆ ಎನ್ನುತ್ತಾರೆ. ನಾನು ಸರ್ಕಾರಿ ನೌಕರನಾಗಿದ್ದು ಕೇವಲ ವಾದಿಯರಿಗೆ ಸಹಾಯ ಮಾಡುವ ದೃಷ್ಟಿಯಿಂದ ಅವರ ಪರ ಕೆಲಸ ನಿರ್ವಹಿಸಿರುತ್ತೇನೆ ಎಂದರೆ ಸಾಕ್ಷಿ ಅದನ್ನು ನಾನು ಒಪ್ಪುವುದಿಲ್ಲ ಎನ್ನುತ್ತಾರೆ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ